ಶ್ರೀ ಎ. ಜೆ. ದೊಡ್ಡಮೇಟಿ.—ತಾವು ಟೇಬರ್ ಮೇಲೆ ಇಟ್ಟದ್ದು 106 ಸಂಖ್ಯೆಯ ಲಸ್ಟ್. ಎಲ್ಲಾ ಪತ್ರಿಕೆಗಳ ನರ್‌ಕ್ಯುಲೇಷನ್ ಎಷ್ಟು ಇದೆ ಎಂಬುದನ್ನು ಹೇಳುವುದಕ್ಕಾಗುತ್ತದೆಯೇ?

†ಶ್ರೀ ಬಿ. ಬಸವಲಿಂಗಪ್ಪ.—ಪ್ರತ್ಯೇಕವಾಗಿ ಬೇಕಾದರೆ ನಾನು ಹೇಳುತ್ತೇನೆ. ಆಡಿಟ್‌ಬ್ಯೂರೋ ಸದಸ್ಯರಾಗಿರತಕ್ಕ ಪತ್ರಿಕೆ ಸಂಖ್ಯೆ ಕೇಳಿದ್ದಾರೆ. ಬೇರೆ ಕೇಳಿದರೆ ಕೊಡುತ್ತೇನೆ.

ಶ್ರೀ ಎ. ಜೆ. ದೊಡ್ಡಮೇಟಿ.—ಜಾಹಿರಾತು ಕೊಡುವಾಗ ಯಾವ ಆಧಾರದಮೇಲೆ ಕೊಡುತ್ತೀರಿ?

ಶ್ರೀ ಬಿ. ಬಸವಲಿಂಗಪ್ಪ.—ಮುಖ್ಯವಾಗಿ ಅದರ ಸಂಖ್ಯೆ, ಜನಪ್ರಿಯತೆ ಮತ್ತು ಅದರ ಅಂತಸ್ತು ನೋಡಿ ಕೊಡುತ್ತೇವೆ.

ಶ್ರೀ ಬಿ. ಕೆ. ನಾಗೂರ್.—ಜನಪ್ರಿಯತೆಯನ್ನು ಯಾವ ಅಂತಸ್ತಿನಮೇಲೆ ನೋಡುತ್ತೀರಿ?

(ಉತ್ತರವಿಲ್ಲ)

ಶ್ರೀ ಜಿ. ವೆಂಕಟೇಗೌಡ.—ಕೊಡಗಿನ ಜನ್ಮಭೂಮಿ ಒಳ್ಳೆಯ ಜನಪ್ರಿಯತೆಯನ್ನುಗಳಿಸಿದೆಯೇ?

ಶ್ರೀ ಬಿ. ಬಸವಲಿಂಗಪ್ಪ.—ಆ ಪತ್ರಿಕೆ ಅಲ್ಲಿ ನರ್‌ಕ್ಯುಲೇಟ್ ಆಗುತ್ತದೆ. ಆದ್ದರಿಂದ ಸ್ವಲ್ಪ ಅಡ್ವರ್ಟೈಜ್ ಆಗುತ್ತದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—'ಪ್ರಜಾರಾಜ್ಯ'ಕ್ಕೆ 200 ರೂಪಾಯಿಗಳನ್ನು ಅಡ್ವರ್ಟೈಜ್‌ಮೆಂಟ್‌ಗೆ ಕೊಟ್ಟಿದ್ದಾರೆ. ಅದರ ಲಾಸ್ಟ್ ನರ್‌ಕ್ಯುಲೇಷನ್ ಯಾವಾಗ ಆಯಿತು?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರ ಅಭಿಪ್ರಾಯವನ್ನು ಮನಗಂಡು ನಾನು ಈ ಡಿಪಾರ್ಟ್‌ಮೆಂಟ್ ತೆಗೆದುಕೊಂಡಮೇಲೆ ಪ್ರತಿಯೊಬ್ಬರೂ ಡಿಕ್ಲರೇಷನ್ ಫೈಲ್‌ಮಾಡಬೇಕು ಮತ್ತು ಅವುಗಳನ್ನು ರೆಗ್ಯುಲರ್ ಆಗಿ ಪಬ್ಲಿಷ್ ಮಾಡುತ್ತಾರೆಯೇ ಇಲ್ಲವೇ ಎನ್ನುವ ಪ್ರತಿಯೊಂದು ವಿಷಯವನ್ನೂ ತಿಳಿಸಬೇಕು ಎಂದು ಕಾನೂನು ಮಾಡಿದ್ದೇವೆ. ತಮ್ಮ ಪ್ರಶ್ನೆಗೆ ಉತ್ತರ ಹೇಳುವುದಕ್ಕಾಗುವುದಿಲ್ಲ. ಕೆಲವು ದಿನ ಪತ್ರಿಕೆಗಳು ಇವೆ. ಮತ್ತು ಕೆಲವು ಮಾಸಿಕ ಪತ್ರಿಕೆಗಳಿವೆ. ಯಾವ ಪತ್ರಿಕೆ ಪಬ್ಲಿಷ್ ಆಗುತ್ತದೆ, ಯಾವ ಪತ್ರಿಕೆ ಪಬ್ಲಿಷ್ ಆಗುವುದಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ.

Sri C. J. MUCKANNAPPA.—In respect of item No. 3 'Prajavani', you have paid Rs. 24,659. May I know the number of advertisements given to this paper?

ಶ್ರೀ ಬಿ. ಬಸವಲಿಂಗಪ್ಪ.—ಇದರಲ್ಲಿ ಕ್ಲಾಸಿಫೈಡ್ ಅಡ್ವರ್ಟೈಜ್‌ಮೆಂಟ್ ಎಂದು ಇದೆ. ಸ್ಪೆಷಲ್ ಅಡ್ವರ್ಟೈಜ್‌ಮೆಂಟ್ ಎಂದು ಇದೆ. ಕಮರ್ಷಿಯರ್ ಅಡ್ವರ್ಟೈಜ್‌ಮೆಂಟ್ ನಾವು ಸರ್ವೇಸಾಮಾನ್ಯವಾಗಿ ಅದರ ನರ್‌ಕ್ಯುಲೇಷನ್ ಮತ್ತು ಪಬ್ಲಿಕೇಷನ್ ಎಲ್ಲಾ ನೋಡಿಕೊಂಡು ಕೊಡುತ್ತೇವೆ. ಕ್ಲಾಸಿಫೈಡ್ ಅಡ್ವರ್ಟೈಜ್‌ಮೆಂಟನಲ್ಲಿ ಟೆಂಡರ್‌ನೋಟಿಫಿಕೇಷನ್ ಮಾಡುವುದು ಬರುತ್ತದೆ ದಿನ ಪತ್ರಿಕೆಯಾವುದು ಜಾಸ್ತಿ ಸಂಖ್ಯೆಯಲ್ಲಿ ನರ್‌ಕ್ಯುಲೇಟ್ ಆಗುತ್ತದೋ ಆ ಪತ್ರಿಕೆಗೆ ನಾವು ಟೆಂಡರ್‌ನೋಟಿಫಿಕೇಷನ್ ಕೊಡುತ್ತೇವೆ.

ಶ್ರೀ ಎ. ಜೆ. ದೊಡ್ಡಮೇಟಿ.—ಆಡಿಟ್‌ಬ್ಯೂರೋ ಸದಸ್ಯರ ಪತ್ರಿಕೆಗಳ ಪ್ರಸಾರ ಸಂಖ್ಯೆ ಗುರುತುಮಾಡಿಕೊಳ್ಳುವುದಕ್ಕೆ ಏನಾದರೂ ಕ್ರಮ ಅನುಸರಿಸುತ್ತಿದ್ದೀರಾ?

ಶ್ರೀ ಬಿ. ಬಸವಲಿಂಗಪ್ಪ.—ಅವರು ಡಿಕ್ಲರೇಷನ್ ಮೂಲಕ ಡೆಪ್ಯುಟಿಕಮೀಷನರ ಮುಂದೆ ಡಿಕ್ಲೇರ್ ಮಾಡುತ್ತಾರೆ. ಅವರ ಮುಖಾಂತರ ನಮಗೆ ಬರುತ್ತದೆ. ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟರ ಮುಂದೆ ಎಷ್ಟು ನರ್‌ಕ್ಯುಲೇಟ್ ಆಗುತ್ತದೆ ರೆಗ್ಯುಲರ್ ಆಗಿ ಪಬ್ಲಿಷ್ ಆಗುತ್ತದೆಯೇ ಇಲ್ಲವೇ ಎಂಬುದನ್ನೆಲ್ಲಾ ಡಿಕ್ಲೇರ್ ಮಾಡಬೇಕೆಂದು ಮಾಡಿದ್ದೇವೆ.

ಶ್ರೀ ಎ. ಜೆ. ದೊಡ್ಡಮೇಟಿ.—ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಮುಂದೆ ಡಿಕ್ಲೇರ್‌ಮಾಡುವುದಕ್ಕೆ ಪ್ರೆಸ್ ಆಕ್ಟ್ ಪ್ರಕಾರ ನರ್ಕಾರಕ್ಕೆ ಅಧಿಕಾರ ಇದೆಯೇ? ಈ ರೀತಿ ಕೇಳಲಕ್ಕೆ ಯಾವ ಕಾನೂನು ಅಲೋ ಮಾಡುತ್ತದೆ ಎಂದು ಹೇಳುತ್ತೀನೆ?

ಶ್ರೀ ಬಿ. ಬಸವಲಿಂಗಪ್ಪ.—ಆ ರೀತಿ ಕೇಳಲಕ್ಕೆ ಕಾನೂನು ಇದೆ.

ಶ್ರೀ ಎ. ಜೆ. ದೊಡ್ಡಮೇಟಿ.—ಯಾವ ಕಾನೂನು ಪ್ರಕಾರ?

ಶ್ರೀ ಬಿ. ಬಸವಲಿಂಗಪ್ಪ.—ಡಿಕ್ಲರೇಷನ್ ಮಾಡುವುದಕ್ಕೆ ಮತ್ತು ಎಫಿಡೆವಿಟ್‌ಮಾಡುವುದಕ್ಕೆ ಯಾವದು ಕಾನೂನು ಇಂಡಿಯನ್ ಪಿನರ್ ಕೋಡಿನಲ್ಲದೆಯೋ ಅದರ ಪ್ರಕಾರ ಅಧಿಕಾರವಿದೆ. ಮತ್ತು ಜನರಲ್ ಕ್ಲೌಮ್ಸ್ ಆಕ್ಟಿನಲ್ಲಯೂ ಅವಕಾಶವಿದೆ.

Misappropriation in Sri Anjaneya Co-operative Society, Nagavalli.

*Q.—120. Sri G N. PUTTANNA (Tumkur).—

Will the Government be pleased to state:—

(*a*) whether it is a fact that there is a Co-operative Society called "Sri Anjaneya Co-operative Society" at Nagavalli, Hebbur Hobli, Tumkur Taluk;

(*b*) whether it is a fact that the accounts have not been audited since 1944; and if so the reasons therefor;

(*c*) if audited, why the General Body meeting has not been called so far;

(*d*) whether it is a fact that the public have been presenting petitions and making representations for enquiry alleging misappropriation of funds;

(*e*) if so the action taken by them in the matter and if not, the reasons therefor;

(*f*) whether they will appoint a committee to enquire into the truth or otherwise and give protection to the share-holders?

*A.—Sri MALI MARIAPPA (Minister for Co-operation).—

(*a*) Yes.

(*b*) No; Accounts have been audited up to 30th June 1958.

(*c*) Owing to party factions General Body Meeting could not be held. Action is being taken to hold the same up-to-date.

(*d*) Yes.

(*e*) A detailed enquiry has been conducted and no misappropriations have been pointed out.

(*f*) No.

ಶ್ರೀ ಜಿ. ಎನ್. ಪುಟ್ಟಣ್ಣ.—ಕ್ವೆಶ್ಚನ್ (*b*)ಗೆ "No; Accounts have been audited up to 30th June 1958" ಎಂದು ಹೇಳಿದ್ದಾರೆ. ಅಕೌಂಟ್ಸ್ ಆಡಿಟ್‌ಮಾಡಿದವರು ಯಾರು ಎಂಬುದನ್ನು ಹೇಳಬಲ್ಲರಾ ?

ಶ್ರೀ ಮಾಲ ಮರಿಯಪ್ಪ.—ಸೀನಿಯರ್ ಆಡಿಟರ್ ಇನ್ನೊಬ್ಬರ ಜೊತೆಯಲ್ಲಿ ಆಡಿಟ್ ಮಾಡಿದರು.

ಶ್ರೀ ಜಿ. ಎನ್. ಪುಟ್ಟಣ್ಣ.—ಆಡಿಟ್‌ಮಾಡಿದವರು ಡಿಪಾರ್ಟ್‌ಮೆಂಟ್ ಆಡಿಟರೇ ಅಥವಾ ಪ್ರೈವೇಟ್ ಆಡಿಟರೇ ?

ಶ್ರೀ ಮಾಲ ಮರಿಯಪ್ಪ.—ಡಿಪಾರ್ಟ್‌ಮೆಂಟ್ ಆಡಿಟರ್ಸ್.

ಶ್ರೀ ಜಿ. ಎನ್. ಪುಟ್ಟಣ್ಣ.—ತಾವು ಇಲ್ಲಿ ಹೇಳಿದ್ದೀರಿ. 1958ನೆಯ ಇಸ್ವಿ ಜೂನ್ 30ನೆಯ ತಾರೀಖಿನ ವರೆಗೂ ಅಕೌಂಟ್ಸ್ ಆಡಿಟ್ ಆಗಿದೆಯೆಂದು. ಆದರೆ ಜನರಲ್‌ಬಾಡಿ ಮೀಟಿಂಗ್ ಅನ್ನು 1944ನೆಯ ಇಸ್ವಿಯಿಂದಲೂ, ಕಾಲ್‌ಫಾರ್‌ಮಾಡದೆ ಇರಲು ಕಾರಣವೇನು ?

ಶ್ರೀ ಮಾಲ ಮರಿಯಪ್ಪ.—1947ನೆಯ ಇಸ್ವಿಯಿಂದ ಜನರಲ್‌ಬಾಡಿ ಮೀಟಿಂಗ್ ಕರೆದಿಲ್ಲ.

ಶ್ರೀ ಜಿ. ಎನ್. ಪುಟ್ಟಣ್ಣ.—1947ನೆಯ ಇಸ್ವಿಯಿಂದ 1959ನೆಯ ಇಸ್ವಿಯವರಗೂ, ಜನರಲ್‌ಬಾಡಿ ಮೀಟಿಂಗ್ ಕರೆಯದೆ ತುಮಕೂರು ಡಿಸ್ಟ್ರಿಕ್ಟಿನಲ್ಲಿ 56 ಸೊಸೈಟಿಗಳು ಹಾಳಾಗಿ ಹೋಗಿವೆ. ಇದಕ್ಕೆ ಯಾರು ಜವಾಬ್ದಾರರು ?

ಶ್ರೀ ಮಾಲ ಮರಿಯಪ್ಪ.—ಆ ಪರ್ಟಿಕ್ಯುಲರ್ ಸೊಸೈಟಿಯಲ್ಲಿ ಶ್ರೀ ಮರಿರಂಗೇಗೌಡ ಎಂಬವರು ಅಸಿಸ್ಟೆಂಟ್ ಸೆಕ್ರೆಟರಿಯಾಗಿದ್ದರು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾನ್ಯ ಮಂತ್ರಿಗಳು ಹೆಸರು ಹೇಳಬಹುದೇ ?

ಅಧ್ಯಕ್ಷರು.—ಹೇಳಬಹುದು.

Sri C. J. MUCKANNAPPA.—How can the Hon'ble Member speak of a person who is not here ?

ಅಧ್ಯಕ್ಷರು.—ಅದು ಹೇಳಬಹುದು. ಶ್ರೀ ಮರಿರಂಗೇಗೌಡ ಎಂಬುವವರು ಸೆಕ್ರೆಟರಿಯಾಗಿದ್ದರು ಎಂದು ಹೇಳಬಹುದು.

Sri J. B. MALLARADHYA.—You yourself ruled that names should not be mentioned. If it is a revised ruling, I will accept.

ಅಧ್ಯಕ್ಷರು.—ಶ್ರೀ ಮರಿರಂಗೇಗೌಡ ಎಂಬವರು ಸೆಕ್ರೆಟರಿ ಯಾಗಿದ್ದರು ಎಂದು ಹೇಳಿದರೆ ಪರವಾಯಿಲ್ಲ. But defamatory statement in respect of that person cannot be allowed. If he is going to say something against that man, I will not allow.

Sri C. J. MUCKANNAPPA.—Four days back when I was putting a question about the Tumkur Deputy Commissioner, you were pleased to observe that no names should be brought in, and no individual officer should be brought in.

Mr. SPEAKER.—I will stick up to that ruling. Names should be avoided.

Sri MALI MARIAPPA.—I am agreeable to avoid names. ಆಗ ಇದ್ದಂಥ ಅಸಿಸ್ಟೆಂಟ್ ಸೆಕ್ರೆಟರಿಗಳು, ನುಮಾರು 1951ನೆಯ ಇಸವಿಯಲ್ಲಿ ಗತಿಸಿಹೋದುದರಿಂದ, ಅದಕ್ಕೆ ಸಂಬಂಧಪಟ್ಟ ಪುಸ್ತಕಗಳು, ಲೆಕ್ಕಪತ್ರಗಳು ಸಕಾಲದಲ್ಲಿ ದೊರಕದೆ ನಿಧಾನ ವಾಗಿದೆ.

ಶ್ರೀ ಜಿ. ಎನ್. ಪುಟ್ಟಣ್ಣ.—ಆ ಲೆಕ್ಕಪತ್ರಗಳಿಗೆರ್ಲಾ ಗೆದ್ದಲು ಹಿಡಿಯತ್ತೇ ?

ಶ್ರೀ ಮಾಲ ಮರಿಯಪ್ಪ.—ಕೆಲವು ಲೆಕ್ಕ ಪತ್ರಗಳು ಇಲ್ಲ ಎಂದು ಆಡಿಟರ್ ಹೇಳುತ್ತಾರೆ. ಆದರೂ ಮುಖ್ಯವಾದವುಗಳು ಕೆಲವು ಸಿಕ್ಕಿವೆ.

ಶ್ರೀ ಜಿ. ಎನ್. ಪುಟ್ಟಣ್ಣ.—ಲೆಕ್ಕಪತ್ರಗಳು ಆಡಿಟ್ ಆಗದೆ ಮಿಸ್‌ಅಪ್ರೊಪ್ರಿಯೇಷನ್ ಆಗಿಲ್ಲ ಎಂದು ಯಾವ ಆಧಾರದಮೇಲೆ ಹೇಳುತ್ತೀರಿ ?

ಶ್ರೀ ಮಾಲ ಮರಿಯಪ್ಪ.—ಯಾವ ಯಾವ ಲೆಕ್ಕಪತ್ರಗಳು ಮಿಸ್ ಆಗಿವೆ ಎನ್ನುವುದನ್ನು ತಿಳಿದುಕೊಂಡರೆ ಒಳ್ಳೆಯದು. ಕೆಲವು ಡಿಕ್ರೀಸ್ ಜಾರಿಮಾಡಿದಮೇಲೆ ಕೆಲವು ಜಮೀನುಗಳನ್ನು ತೆಗೆದುಕೊಂಡಿದ್ದಾರೆ. ಅದಕ್ಕೆ ಸಂಬಂಧಪಟ್ಟ ಕೆಲವು ಲೀಜ್ ಡೀಡ್ಸ್ ಇಲ್ಲ ಎಂದು ಹೇಳಿದ್ದಾರೆ. ಆದ್ದರಿಂದ ಲೆಕ್ಕಪತ್ರಗಳ ಸಿಕ್ಕಿಲ್ಲ ಎಂದು ಜನರಲ್ ಆಗಿ ಹೇಳಿದ್ದಾರೆ.

Grant of enhanced Subsidy for Sinking Wells.

*Q.—134. Sri P. ANJANAPPA (Sira).—

Will the Government be pleased to state :—

(*a*) whether they propose to grant well subsidies at the rate of one thousand rupees as was given in the past ;

(*b*) whether the present amount of well subsidy, *i.e.*, Rs. 250 is sufficient to take up the work ;

(*c*) if not, whether they would consider a proposal to sanction one thousand rupees as well subsidy and two thousand rupees as loan recoverable in twenty annual instalments ?